ಅವರನ್ನೂ ಅಭಿನಂದಿಸುತ್ತೇನೆ ಹಾಗೂ ಸಂಬಂಧಪಟ್ಟ ನಗರಾಭಿವೃದ್ಧಿ ಮಂತ್ರಿಗಳನ್ನೂ ನನ್ನ ಮಿತ್ರರೂ ಆದ ಜಾರ್ಜ್ ಅವರು, ಪ್ರಾಮಾಣಿಕವಾಗಿ ಮೂರೂ ಜನರು ಸೇರಿ ಇದಕ್ಕೆ ಒಳ್ಳೆಯ ರೂಪವನ್ನು ಕೊಟ್ಟಿದ್ದಾರೆ. ಇದು ಇತಿಹಾಸದಲ್ಲಿ ಬರೆಯತಕ್ಕ ದಿನ. ಅನೇಕ ವರ್ಷಗಳಿಂದ ಬೆಳಘಾವಿ ಮಹಾನಗರ ಪಾಲಿಕೆ ಮೇಲೆ ತಮ್ಮದೇ ಆದ ಮರಾಠಿ ಧ್ವಜ ಹಾಕಿ ಮಹಾನಗರ ಪಾಲಿಕೆಯನ್ನು ತಮ್ಮ ಪಕ್ಷದ ಕಾರ್ಯಾಲಯ ಮಾಡಿಕೊಂಡಂತೆ ಮಾಡಿಕೊಂಡಿದ್ದರು. ಇವತ್ತು ಅದು ಕಡೆಗೊಂಡು ನಾಳೆಯಿಂದಲೇ ಈ ಬಾವುಟವನ್ನು ಕೆಳಗೆ ಇಳಿಸತಕ್ಕ ಒಂದು ವಿಧೇಯಕ ಇಲ್ಲಿ ಬರುತ್ತಾ ಇರತಕ್ಕದ್ದು ನಿಜವಾಗಿಯೂ ಮೆಚ್ಚತಕ್ಕದ್ದು. ಆ ಮೆಚ್ಚುಗೆಯನ್ನು ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ನನಗಂತೂ ಒಂದು ಹಂಡೆ ಹಾಲು ಕುಡಿದಂಥ ಸಂತೋಷವಾಗಿದೆ ಈ ದಿನ. ಕನ್ನಡಿಗರೆಲ್ಲರೂ ಇಂದು ಸಂತೋಷಪಡುವ ದಿನ. ಇದೇ ಧಾಟಿಯಲ್ಲಿ ಬೆಳಗಾವಿ ಗಡಿ, ಒಂದು ಗಂಡು ಮೆಟ್ಟಿನ ನೆಲ ಏನಿದೆ, ಈ ಬೆಳಗಾವಿಯ ಸಮಗ್ರ ಅಭಿವೃದ್ಧಿಯ ಬಗ್ಗೆಯೂ ಈ ಸರ್ಕಾರ ಗಮನ ಹರಿಸಬೇಕು ಎಂದು ಈ ಸರ್ಕಾರಕ್ಕೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈಗ ಜನಗಣತಿ ನಡೆಯುತ್ತಿದೆ. ಅಲ್ಲಿ ಮರಾಠಿಯಲ್ಲಿ ಫಾರಂಗಳನ್ನು ಕೊಡುತ್ತಿದ್ದಾರೆ. ಅನೇಕ ಜನ ಕನ್ನಡದವರಿಗೆ ಯಾವರೀತಿ ಹೆಸರುಗಳನ್ನು ನೋಂದಾಯಿಸಬೇಕು ಎಂಬ ಪ್ರಶ್ನೆ ಬಂದಿದೆ. ಆದ್ದರಿಂದ ಈ ಪ್ರಶ್ನೆ ಹೋಗಲಾಡಿಸುವುದಕ್ಕೆ ಕೂಡಲೇ ಕನ್ನಡದಲ್ಲಿ ಫಾರಂಗಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ವಿಧೇಯಕದ ಬಗ್ಗೆ ನಾನು ನಿಜವಾಗಿಯೂ ಬಹಳ ಸಂತೋಷಪಟ್ಟಿದ್ದೇನೆ. ಇಂಥ ವಿಧೇಯಕವನ್ನು ತಂದಂಥ ಸರ್ಕಾರವನ್ನು ನಾನು ನೂರ್ಮಡಿ ಅಭಿನಂದಿಸುತ್ತೇನೆ. ಈ ವಿಧೇಯಕವನ್ನು ಇವತ್ತೇ ತೆಗೆದುಕೊಂಡು ಸಂಪೂರ್ಣವಾಗಿ ಇದನ್ನು ಒಪ್ಪಬೇಕು ಎಂದು ಕೇಳಿಕೊಂಡು ತಮ್ಮ ಮೂಲಕ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಡೀ ಸದನ ಈ ಒಂದು ವಿಧೇಯಕವನ್ನು ಸ್ವಾಗತ ಮಾಡಿದ್ದಕ್ಕೆ ತಮಗೆಲ್ಲರಿಗೂ ಅಭಿನಂದಿಸಿ ಆದಷ್ಟು ಬೇಗ ಇದನ್ನು ಪಾಸ್ ಮಾಡಿಕೊಟ್ಟರೆ ಇದು ಒಂದು ಮಸೂದೆಯಾಗುತ್ತದೆಂದು ಹೇಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವನೆ ಹೀಗಿದೆ : "1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ : ಈ ಮ್ಯಾಟರ್ ಅಜೆಂಡಾದಲ್ಲಿ ಇಲ್ಲ. ಆದ್ದರಿಂದ ಅದಕ್ಕನುಗುಣವಾಗಿ ಕನ್ಸಿಡರೇಷನ್ ಮತ್ತು ಪಾಸಿಂಗ್ ಎಂದು ತಾವು ಒಂದು ಮಾತು ಆಡಿದರೆ, ಅದು ರೆಕಾರ್ಡ್ನಲ್ಲಿದ್ದರೆ ಒಳ್ಳೆಯದು.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಬೇಕು.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಅನುಬಂಧ

ಉಪಾಧ್ಯಕ್ಷರು : ಈ ವಿಧೇಯಕವನ್ನು ಇಂದೇ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು. ಹಾಗೂ ಸರ್ವಾನುಮತದ ಅಂಗೀಕಾರ ಇದಕ್ಕೆ ಮೊರಕಬೇಕೆಂದು ಸಭೆಯ ಸದಸ್ಯರೆಲ್ಲರೂ ಅಭಿಪ್ರಾಯಪಡುತ್ತಿರುವುದರಿಂದ, ಈ "ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ-1991"ನ್ನು ಇಂದೇ ಪರ್ಯಾಯಲೋಚನೆಗೆ ಎತ್ತಿಕೊಳ್ಳುತ್ತಿದ್ದೇನೆ.

1991ನೇ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಜೆ. ಜಾರ್ಜ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, 1991ನೇ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"1991ನೇ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವವು ಸರ್ವಾನುಮತದಿಂದ ಮತ್ತು ಅವಿರೋಧವಾಗಿ ಅಂಗೀಕರಿಸಲ್ಪಟ್ಟಿತು.

Clause by clause consideration

ಖಂಡ 2 ಮತ್ತು 3:

ಅಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾದವು)

ಖಂಡ 1 ಇತ್ಯಾದಿ :

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಜೆ. ಜಾರ್ಜ್ : ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : 1991ನೇ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ : "1991ನೇ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸರ್ವಾನುಮತದ ಒಪ್ಪಿಗೆ ನೀಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ.

(ಮುಖ್ಯಮಂತ್ರಿಯವರಿಂದ ಉತ್ತರ)

ಉಪಾಧ್ಯಕ್ಷರು : ಈಗ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪ ಸಭಾಧ್ಯಕ್ಷೆಯವರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾ ನಿರ್ಣಯವನ್ನು ಮಾನ್ಯ ಸದಸ್ಯರಾಗಿರತಕ್ಕ ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಮಂಡಿಸಿದ್ದು, ಶ್ರೀ ಪ್ರಭಾಕರ್ ರಾಣೆಯವರು ಏನು ಅನುಮೋದನೆ ಮಾಡಿದ್ದಾರೆ. ಆ ನಿರ್ಣಯದ ಮೇಲೆ ಸುದೀರ್ಘವಾದ ಚರ್ಚೆ ಈ ಸದನದಲ್ಲಿ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯಲ್ಲಿ ವಂದನಾ ನಿರ್ಣಯವನ್ನು ಮಂಡನೆ ಮಾಡಿದವರೂ ಇಲ್ಲ, ಅನುಮೋದನೆ ಮಾಡಿದವರೂ ಇಲ್ಲ. ಭಾಷಣ ಮಾಡಿದವರು ಅಷ್ಟೇ ಇದ್ದೇವೆ; ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಇಷ್ಟು ಹೊತ್ತು ಇಲ್ಲೇ ಇದ್ದರು. ಈಗಷ್ಟೇ ಹೊರ ಹೋಗಿದ್ದಾರೆಂದು ಕಾಣುತ್ತದೆ. ಅವರು ಬರುತ್ತಾರೆ. ಶ್ರೀಯುತ ರಾಣೆಯವರು ಸದ್ಯಕ್ಕೆ ನಗರದಲ್ಲಿಲ್ಲ ಎಂದು ಕಾಣುತ್ತದೆ. ಮುಖ್ಯವಾಗಿ ತಾವು ಇದ್ದರೆ ಸಾಕು ನಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂಡನೆ ಹಾಗು ಅನುಮೋದನೆ ಮಾಡಿದವರಿಗೆ ಈ ನಿರ್ಣಯವನ್ನು ಪಾಸ್ ಮಾಡಿಸಿಕೊಳ್ಳಬೇಕೆಂದು ಕಳಕಳಿ ಇರಬೇಕಲ್ಲವೇ? ಹೀಗೆ ಆಗಬಾರದು. ನೀವಿದ್ದೀರೆ ಎಂದು ಹೇಳುವುದು ಅಲ್ಲ. ಸೀರಿಯಸ್‌ನೆಸ್ ಇರಬೇಕೆಂದು ದೃಷ್ಟಿಯಿಂದ ಹೇಳುತಿದ್ದೇವೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಂಡನೆ ಮಾಡಿದವರ ಜೊತೆ ಆ ಕಡೆಯ ಶಾಸಕರೆಲ್ಲರೂ ಖಾಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಈ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯಾಗತಕ್ಕಂಥಾದ್ದು ಏನಿದೆ, ಅದು ರಾಜ್ಯಾಂಗ ಬದ್ಧವಾಗಿರತಕ್ಕಂತಹ ಒಂದು ವಿಧ ಅಥವಾ ಅದರ ನಿಯಮಗಳಿಗನುಗುಣವಾಗಿ ಇಲ್ಲಿ ನಿರ್ಣಯವನ್ನು ಮಂಡನೆ ಮಾಡತಕ್ಕಂಥದ್ದು ನೀತಿ ನಿಯಮಗಳನ್ನು ಅನುಸರಿಸತಕ್ಕಂಥಾದ್ದು ಹಾಗೂ ಅದರ ಮೇಲೆ ಚರ್ಚೆ ಮಾಡತಕ್ಕಂಥಾದ್ದು ರಾಜ್ಯಾಂಗಬದ್ಧವಾಗಿರತಕ್ಕಂತಹ ಒಂದು ವಿಧಿಗನುಸಾರವಾಗಿ ನಾವು ಇಲ್ಲಿ ಮಾಡತಕ್ಕಂತಹ ಒಂದು ಕಾರ್ಯಕ್ರಮ. ಈ ಒಂದು ಚರ್ಚೆ ಈ ಸದನದಲ್ಲಿ ಈ ಸಾರಿ ಕೂಡ ನಡೆದಿದೆ. ಈ ಚರ್ಚೆ ನಡೆಯತಕ್ಕಂತಹ ಕಾಲದಲ್ಲಿ ಸರಕಾರ 91-92ರ ಅವಧಿಯಲ್ಲಿ ಅಂದರೆ ಏಪ್ರಿಲ್ ತಿಂಗಳಿನಿಂದ ಏನು ವಾರ್ಷಿಕ ವರ್ಷ ಪ್ರಾರಂಭವಾಗುತ್ತದೆ ಆ ಅವಧಿಯಲ್ಲಿ ಯಾವ ಕಾರ್ಯಕ್ರಮಗಳ ಬಗ್ಗೆ ನಾವು ಯಾವ ನೀತಿ ನಿರೂಪಣೆಯನ್ನು ಮಾಡಬೇಕೆಂಬ ವಿಚಾರಕ್ಕೆ ಮಾತ್ರ ಅದನ್ನು ಸೀಮಿತಗೊಳಿಸಿ ನಾವು ರಾಜ್ಯಪಾಲರ ಭಾಷಣವನ್ನು ಮಂಡನೆ ಮಾಡುತ್ತೇವೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)